॥ ಸುಭಾಷಿತ ॥

ಮಹಲಿನಲ್ಲಿ ಇರುವವರು ತೃಪ್ತರಿರುತ್ತಾರೆ ಎಂದೇನೂ ಅಲ್ಲ. ಗುಡಿಸಲಿನಲ್ಲಿ ಇರುವವರು ಅತೃಪ್ತರಿರುತ್ತಾರೆ ಎಂದೇನೂ ಅಲ್ಲ. ಬದುಕುವ ಕಲೆ ಗೊತ್ತಿದ್ದರೆ ಗುಡಿಸಲೇ ಸ್ವರ್ಗ ಆಗಿಬಿಡುತ್ತದೆ. ಅದಕ್ಕೆ ದಾಹ ಇರಬಾರದು. -ಶ್ರೀ ಸಿದ್ದೇಶ್ವರ ಸ್ವಾಮಿಗಳು

ಪ್ರಜಾವಾಣಿ

ನ್ಯಾಯ ದಕ್ಕಲಿ

ಅತ್ಯಾಚಾರದ ಕ್ರೌರ್ಯದಲ್ಲಿ ನಲುಗಿದ 23 ವರ್ಷದ ದೆಹಲಿ ವಿದ್ಯಾರ್ಥಿನಿಯ ಸಾವು ಒಂದು ಶತಕೋಟಿ ಜನಸಂಖ್ಯೆಯ ಭಾರತವನ್ನು ಅಲಗಾಡಿಸಿದೆ. ಹೀನ ವ್ಯವಸ್ಥೆಯ ವಿರುದ್ಧ ಆಕ್ರೋಶ, ಜುಗುಪ್ಸೆ ವ್ಯಕ್ತಪಡಿಸಲು ಲಕ್ಷಾಂತರ ಭಾರತೀಯರು ವಿವಿಧ ಸಂಪರ್ಕ ಮಾಧ್ಯಮಗಳನ್ನು ಬಳಸಿದ್ದಾರೆ. ಬೀದಿಗೆ ಬಂದು ಪ್ರತಿಭಟಿಸಿದ್ದಾರೆ. ಹುಡುಗಿಯೊಬ್ಬಳ ಮೇಲಿನ ಅತ್ಯಾಚಾರ ಈ ಮಟ್ಟಿಗೆ ರಾಷ್ಟ್ರವನ್ನು ಒಗ್ಗೂಡಿಸಿದ್ದು ಒಂದು ದಾಖಲೆ. ಕಳೆದ 14 ದಿನಗಳಿಂದಲೂ ರಾಷ್ಟ್ರದ ವಿವಿಧ ಭಾಗಗಳಲ್ಲಿ ನಡೆಯುತ್ತಿರುವ ಪ್ರತಿಭಟನೆಗಳ ಕಾವು ತಗ್ಗಿಲ್ಲ. ಈ ಸಾವು, ಹೋರಾಟ ವ್ಯರ್ಥವಾಗದಂತೆ ನ್ಯಾಯ ಒದಗಿಸಬೇಕಾದುದು ವ್ಯವಸ್ಥೆಯ ಜವಾಬ್ದಾರಿ. ಈ ದುರದೃಷ್ಟಕರ ಅತ್ಯಾಚಾರ ಪ್ರಕರಣ, ಮುಂದಿನ ದಿನಗಳಲ್ಲಿ ರಚನಾತ್ಮಕ ಕ್ರಿಯೆಗಳಿಗೆ ನಾಂದಿಯಾಗಲಿದೆ ಎಂಬಂತಹ ಆಶ್ವಾಸನೆಯನ್ನೇನೊ ಪ್ರಧಾನಿ ಮನಮೋಹನ್ ಸಿಂಗ್ ನೀಡಿದ್ದಾರೆ. ಆದರೆ ಮುಖ್ಯವಾಗಿ ಆಗಬೇಕಿರುವುದು, ಈಗಾಗಲೇ ಇರುವ ಕಾನೂನುಗಳ ಸಮರ್ಪಕ ಜಾರಿ. ಅತ್ಯಾಚಾರ ಪಿಡುಗಿನ ನಿಯಂತ್ರಣಕ್ಕೆ ನಮ್ಮಲ್ಲಿ ಸಾಕಷ್ಟು ಕಾನೂನುಗಳಿವೆ. ಕನಿಷ್ಠ ಏಳು ವರ್ಷದಿಂದ ಆಜೀವ ಶಿಕ್ಷೆ ವಿಧಿಸುವವರೆಗೂ ಈ ಕಾನೂನುಗಳಲ್ಲಿ ಅವಕಾಶ ಇದೆ. ಹೀಗಿದ್ದೂ ಭಾರತದಲ್ಲಿ ಅತ್ಯಾಚಾರ ಪ್ರಕರಣಗಳಲ್ಲಿ ಶಿಕ್ಷೆಯ ಪ್ರಮಾಣ ಶೇ 26ರಷ್ಟು ಕೆಳಮಟ್ಟದಲ್ಲಿದೆ ಏಕೆ ಎಂಬುದನ್ನು ಗಂಭೀರವಾಗಿ ಪುನರ್ವಿಮರ್ಶಿಸಲು ಇದು ಸಕಾಲ.

ಅತ್ಯಾಚಾರ ಪ್ರಕರಣಗಳನ್ನು ನಿರ್ವಹಿಸುವಲ್ಲಿ ಪೊಲೀಸ್ ವ್ಯವಸ್ಥೆ ಎಷ್ಟರ ಮಟ್ಟಿಗಿನ ಸಂವೇದನಾಶೀಲತೆ ಪ್ರದರ್ಶಿಸುತ್ತದೆ ಎಂಬುದು ಮೊದಲಿಗೆ ಇಲ್ಲಿ ಮುಖ್ಯವಾದುದು. ದೂರು ನೀಡುವ ಮಹಿಳೆಯನ್ನೇ ಸಂದೇಹಿಸುವ ಪೂರ್ವಗ್ರಹಗಳ ಮನಸ್ಥಿತಿ ಪೊಲೀಸ್ ವ್ಯವಸ್ಥೆಯಲ್ಲಿನ್ನೂ ಬದಲಾಗಿಲ್ಲ. ಪೊಲೀಸ್ ಉನ್ನತ ಅಧಿಕಾರಿಗಳೂ ಇದಕ್ಕೆ ಹೊರತಲ್ಲ. ಹೀಗಾಗಿಯೇ ಮಹಿಳೆ ಯಾಕೆ ರಾತ್ರಿ ಹೊತ್ತು ಮನೆಯಿಂದ ಹೊರಗಿದ್ದಳು, ಎಂತಹ ಬಟ್ಟೆ ಧರಿಸಿದ್ದಳು ಎಂಬಂತಹ ಬಾಲಿಶವಾದ, ಪೂರ್ವಗ್ರಹಗಳ ಮನಸ್ಥಿತಿಗಳ ಪ್ರಶ್ನೆಗಳನ್ನು ಪದೇ ಪದೇ ನಮ್ಮ ಉನ್ನತ ಪೊಲೀಸ್ ಅಧಿಕಾರಿಗಳು ಹಾಗೂ ರಾಜಕೀಯ ನಾಯಕರು ಕೇಳುತ್ತಲೇ ಇರುತ್ತಾರೆ. ಆ ಮೂಲಕ ಅತ್ಯಾಚಾರಕ್ಕೊಳಗಾದವಳನ್ನೆ 'ಅಪರಾಧಿ'ಯಾಗಿಸುತ್ತಿರುತ್ತಾರೆ. ವೃತ್ತಿಪರವಲ್ಲದ, ಇಂತಹ ಮನೋಭಾವ ಪ್ರದರ್ಶನಗಳಿಂದಲೇ ತನಿಖೆಯ ಹಾದಿ ತಪ್ಪುವುದು ಆರಂಭವಾಗುತ್ತದೆ. ನಂತರ, ದೋಷಯುಕ್ತವಾದ ಎಫ್‌ಐಆರ್‌ಗಳು, ವೈದ್ಯಕೀಯ ಸಾಕ್ಷ್ಯ ಸಂಗ್ರಹಿಸುವಲ್ಲಿನ ವಿಳಂಬ ಹಾಗೂ ಕಳಪೆ ತನಿಖಾ ವಿಧಾನಗಳು ಅತ್ಯಾಚಾರಿಗೆ ಶಿಕ್ಷೆಯಾಗುವುದನ್ನು ತಪ್ಪಿಸುತ್ತವೆ ಎಂಬುದು ಕಟು ವಾಸ್ತವ. ಈ ಅದಕ್ಷತೆಯ ಜೊತೆಗೆ ಭ್ರಷ್ಟಾಚಾರವೂ ಸೇರಿಕೊಂಡು ಅತ್ಯಾಚಾರಕ್ಕೊಳಗಾದ ಮಹಿಳೆಗೆ ನ್ಯಾಯ ಸಿಗುವುದು ಮರೀಚಿಕೆಯೇ ಆಗುತ್ತದೆ. 'ಅತ್ಯಾಚಾರದಂತಹ ಅಪರಾಧಗಳನ್ನು ಸಮಾಜ ಸಹಿಸುವುದಿಲ್ಲ; ತ್ವರಿತವಾಗಿ ಶಿಕ್ಷೆಯಾಗುವುದು ಖಚಿತ' ಎಂಬಂತಹ ಸಂದೇಶವನ್ನು ಅತ್ಯಾಚಾರಿಗಳಿಗೆ ರವಾನಿಸುವುದು ಮುಖ್ಯ. ಈ ನಿಟ್ಟಿನಲ್ಲಿ ವಿಫಲವಾಗಿರುವ ಪೊಲೀಸ್, ನ್ಯಾಯಾಂಗ ವ್ಯವಸ್ಥೆ ಹಾಗೂ ರಾಜಕೀಯ ನಾಯಕರು ಈಗಲಾದರೂ ಎಚ್ಚೆತ್ತುಕೊಳ್ಳಬೇಕಾಗಿದೆ. ಮಹಿಳೆ ವಿರುದ್ಧ ಅಪರಾಧ ಪ್ರಕರಣಗಳು ಹೆಚ್ಚಾಗುತ್ತಿರುವ ಪ್ರಸಕ್ತ ಸನ್ನಿವೇಶದಲ್ಲಿ, ಪೊಲೀಸ್ ವ್ಯವಸ್ಥೆಯಲ್ಲಿ ಮಹಿಳಾ ಸಂಖ್ಯಾ ಬಲ ಹೆಚ್ಚುವ ಅಗತ್ಯವೂ ಇದೆ. ಅಷ್ಟೇ ಅಲ್ಲ, ಮನೆ ಒಳಗೆ ಹಾಗೂ ಹೊರಗೆ ಮಹಿಳೆಯ ಘನತೆಯ ಬದುಕಿಗೆ ಪೂರಕವಾಗುವಂತಹ ಮೌಲ್ಯಗಳ ಕುರಿತು ಅರಿವು ಮೂಡಿಸುವ ಸಾಮಾಜಿಕ ಹೊಣೆಗಾರಿಕೆ ಎಲ್ಲರದಾಗಬೇಕು.

ದಾರಿ ತಪ್ಪಿದ ಪಾಲಿಕೆ

ನಗರದಲ್ಲಿ ನಾಲ್ಕು ಸುತ್ತು ಹಾಕಿದರೆ ಸಾಕು, ನಮ್ಮ ಮಹಾನಗರ ಪಾಲಿಕೆ ಹೇಗೆ ಕಾರ್ಯನಿರ್ವಹಿಸುತ್ತಿದೆ ಎನ್ನುವುದರ ಸ್ಪಷ್ಟ ಚಿತ್ರಣ ಸಿಗುತ್ತದೆ. ಎಲ್ಲೆಂದರಲ್ಲಿ ಕಸ, ಕಿತ್ತುಹೋದ ರಸ್ತೆಗಳು, ಇಳಿಬಿದ್ದ ವಿದ್ಯುತ್‌ತಂತಿಗಳು, ಗೋಡೆಗಳ ಮೇಲೆ ಯದ್ವಾತದ್ವಾ ಪೋಸ್ಟರ್‌ಗಳು, ಗುಂಡಿಗಳಲ್ಲಿ ರೋಗ ಹರಡುತ್ತಾ ನಿಂತ ನೀರು...ಇಷ್ಟು ಸಾಲದೇ ಬೆಂಗಳೂರಿನಲ್ಲಿ ಮಹಾನಗರ ಪಾಲಿಕೆ ಅಸ್ತಿತ್ವದಲ್ಲಿ ಇದೆಯೋ ಇಲ್ಲವೋ ಎಂದು ಕೇಳಲು? ಒಂದು ಕಾಲದಲ್ಲಿ ಅತ್ಯಂತ ಸುಂದರ ನಗರ ಎಂದೇ ಹೆಸರುವಾಸಿಯಾಗಿದ್ದ ಬೆಂಗಳೂರು ನಗರ ಈಗ 'ಹೆಗ್ಗಣ'ಗಳ ಕೈಗೆ ಸಿಲುಕಿ ಚಿಂದಿಯಾಗಿದೆ. 'ಬಿಬಿಎಂಪಿ ಆರ್ಥಿಕ ಸಂಕಷ್ಟದಲ್ಲಿದೆ. ನಿಗದಿತ ಸಮಯದಲ್ಲಿ ಸಾಲ ಮತ್ತು ಬಡ್ಡಿ ತುಂಬದಿದ್ದರೆ, ಆರ್ಥಿಕವಾಗಿ ದಿವಾಳಿ ಎದ್ದಿದೆ ಎನ್ನುವ ಘೋಷಣೆಯಾಗುವ ಆತಂಕದಲ್ಲಿದೆ' ಎಂದು ಬಿಬಿಎಂಪಿ ಆಯುಕ್ತರೇ ಮಾಸಿಕ ಸಭೆಯಲ್ಲಿ ಕಳವಳ ವ್ಯಕ್ತಪಡಿಸಿರುವುದು ಪರಿಸ್ಥಿತಿಯ ವಿಕೋಪಕ್ಕೆ ಸಾಕ್ಷಿಯಾಗಿದೆ. ಆಯುಕ್ತರೇ ಹೇಳುವ ಪ್ರಕಾರ ರೂ.918 ಕೋಟಿ ಮೊತ್ತದ ಬಿಲ್ ಪಾವತಿ ಬಾಕಿ ಉಳಿದುಕೊಂಡಿದೆ.ರೂ.452 ಕೋಟಿ ಸಾಲದ ಕಂತು ಕಟ್ಟಬೇಕಿದೆ. ಬಾಕಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ರೂ.2.392 ಕೋಟಿ ರೂಪಾಯಿ ಬೇಕಾಗಿದೆ. ಹುಡ್ಕೋದಿಂದ ಸಾವಿರ ಕೋಟಿ ರೂಪಾಯಿ ಸಾಲ ಕೇಳಲಾಗಿದೆ. ಸರ್ಕಾರದಿಂದ ನೂರು ಕೋಟಿ ರೂಪಾಯಿ ವಿಶೇಷ ಅನುದಾನ ಪಡೆಯಲಾಗಿದೆ. ಈ ಹಿಂದೆ ಬಿಬಿಎಂಪಿಗೆ ಸೇರಿದ ಕಟ್ಟಡವನ್ನೇ ಅಡಮಾನವಿಟ್ಟು ಸಾಲ ಪಡೆದಿದ್ದ ಬಿಬಿಎಂಪಿ, ಸಾಲದ ಮೇಲೆ ಸಾಲ ಮಾಡುತ್ತಾ, ಜನಸಾಮಾನ್ಯರ ಮೇಲೆ ಹೊರೆ ಏರುತ್ತಿರುವುದು ಸಮರ್ಥನೀಯವಲ್ಲ.

ಬೃಹತ್ ಮಹಾನಗರ ಪಾಲಿಕೆ ಸದಸ್ಯರು ಲೋಕಾಯುಕ್ತ ದಾಳಿಗೆ ಒಳಗಾಗಿ ಅವರು ಅಕ್ರಮವಾಗಿ ಕೂಡಿಟ್ಟ ಕೋಟ್ಯಂತರ ರೂಪಾಯಿ ಆಸ್ತಿಪಾಸ್ತಿ ಬಯಲಾಗಿದೆ. ಹಲವಾರು ಹಗರಣಗಳಲ್ಲಿ ಬಿಬಿಎಂಪಿ ಜನಪ್ರತಿನಿಧಿಗಳೇ ಭಾಗಿಯಾಗಿರುವ ಘಟನೆ ಬಹಿರಂಗವಾಗಿದೆ. ಇತ್ತ ಬಿಬಿಎಂಪಿ ದಿವಾಳಿ ಹಾದಿ ಹಿಡಿದಿದೆ. ರಸ್ತೆ ಕಾಮಗಾರಿಗಳನ್ನು ಜನಪ್ರತಿನಿಧಿಗಳೇ ಹಂಚಿಕೊಂಡರು, ಕಸ ವಿಲೇವಾರಿ ಗುತ್ತಿಗೆಯನ್ನೂ ಅವರೇ ಪಡೆದುಕೊಂಡರು,ಕಸ, ರಸ್ತೆ, ಪರ್ಮಿಟ್, ನೀರು...ಹೀಗೆ ಎಲ್ಲದರಲ್ಲೂ ಹಸ್ತಕ್ಷೇಪ ಮಾಡಿ, ಸದಸ್ಯರು ತಮ್ಮ ವಿರಾಟ್ ರೂಪ ತೋರಿಸಿದ ಫಲ ಇಂದು ಆರ್ಥಿಕಸಂಕಷ್ಟಕ್ಕೆ ದಾರಿಯಾಗಿದೆ. ಮತ್ತೊಂದು ವ್ಯಂಗ್ಯವೆಂದರೆ, ಭ್ರಷ್ಟಾಚಾರ ತಪ್ಪಿಸಲೆಂದೇ ರೂಪಿಸಿದ ವರ್ಕ್ ಕೋಡ್ ವ್ಯವಸ್ಥೆಯಲ್ಲೆ ಭ್ರಷ್ಟಾಚಾರ ನಡೆದದ್ದು! ಎರಡು ಸಾವಿರ ಕೋಟಿ ರೂಪಾಯಿಗಳಷ್ಟು ಮೊತ್ತವನ್ನು ಅಕ್ರಮವಾಗಿ ಪಾವತಿ ಮಾಡಿದ ಘಟನೆ ಪಾಲಿಕೆಯ ಬೊಕ್ಕಸಕ್ಕೆ ನೇರವಾಗಿ ಹಾಕಿದ ಕನ್ನ. ಕಾಮಗಾರಿಗಳ ನಕಲಿ ಬಿಲ್ ಸೃಷ್ಟಿಸಿ, ಪಾಲಿಕೆ ವ್ಯಾಪ್ತಿಯ ಮೂರು ವಿಧಾನಸಭಾ ಕ್ಷೇತ್ರಗಳಲ್ಲಿ ನೂರಾರು ಕೋಟಿ ರೂಪಾಯಿ ಅವ್ಯವಹಾರ ನಡೆದಿದ್ದು, ಅದನ್ನು ಮುಚ್ಚಿಹಾಕಲು ವ್ಯವಸ್ಥಿತ ಯತ್ನ ನಡೆಯಿತು. ಆಶ್ಚರ್ಯವೆಂದರೆ, ಜನಪ್ರತಿನಿಧಿಗಳೇ ಗುತ್ತಿಗೆದಾರರನ್ನು ಸಮರ್ಥಿಸಿಕೊಳ್ಳುತ್ತಾರೆ. ದಾಖಲೆಗಳಿರುವ ಕೊಠಡಿ 'ಆಕಸ್ಮಿಕ' ಬೆಂಕಿಗೆ ಆಹುತಿಯಾಗುತ್ತದೆ. ಎಂಜಿನಿಯರ್‌ಗಳೇ ಪ್ರತಿಭಟನೆಗೆ ರಸ್ತೆಗಿಳಿಯುತ್ತಾರೆ, ಒಟ್ಟಿನಲ್ಲಿ ಬೆಂಗಳೂರು ಮಹಾನಗರ ಪಾಲಿಕೆ ಭ್ರಷ್ಟರ, ಕಬಳಿಕೆದಾರರ 'ಸ್ವರ್ಗ'ವಾಗಿಬಿಟ್ಟಿದೆ. ಆಡಳಿತವನ್ನು ಸ್ವಚ್ಛಗೊಳಿಸುವ ಬದ್ಧತೆ ಮಹಾನಗರ ಪಾಲಿಕೆಯಲ್ಲಿ ಮೂಡುವುದು ಎಂದು?

ಪ್ರಜಾವಾಣಿ 50 ವರ್ಷಗಳ ಹಿಂದೆ

ಸೋಮವಾರ, 31-12-1962

ಪ್ರತ್ಯೇಕತಾವಾದ ರಾಜ್ಯಾಂಗ ವಿರುದ್ಧ

ಕನ್ಯಾಕುಮಾರಿ, ಡಿ. 30– ಭಾರತದ ಒಕ್ಕೂಟದಿಂದ ಪ್ರತ್ಯೇಕಗೊಳ್ಳಬೇಕೆಂಬ ಕೇಳಿಕೆ ರಾಜ್ಯಾಂಗ ವಿರೋಧಿಯಾಗುವುದೆಂದು ಶಾಸನದ ಮೂಲಕ ಪ್ರತಿಪಾದಿಸಬೇಕೆಂಬ ಸಲಹೆಗೆ ದಕ್ಷಿಣ ವಲಯ ಸಮಿತಿ ಇಂದು ಸರ್ವಾನುಮತದ ಬೆಂಬಲ ನೀಡಿತು.

ನಗರದಲ್ಲಿ ಸೊಳ್ಳೆಕಾಟ ತಪ್ಪಿಸಲು ಒಂಬತ್ತು ಲಕ್ಷ ರೂ. ಯೋಜನೆ

ಬೆಂಗಳೂರು, ಡಿ. 30– ನಗರದಲ್ಲಿ ಸೊಳ್ಳೆಕಾಟ ತಪ್ಪಿಸಲು ವಾರ್ಷಿಕ 9 ಲಕ್ಷ ರೂ. ವೆಚ್ಚವಾಗುವ ಕಾರ್ಪೊರೇಷನ್ನಿನ ಯೋಜನೆಯೊಂದಕ್ಕೆ ಸರಕಾರವು ಅಂಗೀಕಾರ ನೀಡಿದೆಯೆಂದು ಮೇಯರ್ ಶ್ರೀ ವಿ.ಎಸ್. ಕೃಷ್ಣಯ್ಯರ್‌ರವರು ಇಂದು ತಿಳಿಸಿದರು.

ದಾರಿ ದೀಪ

ದಯೆಗಿಂತ ದೊಡ್ಡ ಬುದ್ಧಿವಂತಿಕೆ ಎಲ್ಲಿ ಸಿಕ್ಕುತ್ತದೆ?

-ರೋಸೋ

ಕರ್ತವ್ಯವನ್ನು ಕುರಿತು ಮೊದಲು ಯೋಚನೆ ಮಾಡಿ; ಹಕ್ಕುಗಳು ಆಮೇಲೆ ಬರಲಿ.

-ಡಿ.ವಿ.ಗುಂಡಪ್ಪ

ನ್ಯಾಯಾಂಗ ಸುಧಾರಣೆ: ವಿಲೇವಾರಿಯ ವೇಗ

ಸುಧೀರ್ ಕೃಷ್ಣಸ್ವಾಮಿ
ಅಭಯರಾಜ್ ನಾಯಕ್

ಭಾರತದ ಸುಪ್ರೀಂ ಕೋರ್ಟ್ ಅನ್ನು ವಿಶ್ವದ ಅತ್ಯಂತ ಶಕ್ತಿಶಾಲಿ ನ್ಯಾಯಾಲಯ ಎಂದು ಗುರುತಿಸಲಾಗುತ್ತದೆ. ಬಡವರ ರಕ್ಷಕ, ಸಾಂವಿಧಾನಿಕ ಆಡಳಿತದ ರಕ್ಷಾಕವಚ ಮತ್ತು ಜನರು ಅತ್ಯಂತ ವಿಶ್ವಾಸಾರ್ಹವೆಂದು ಭಾವಿಸಿರುವ ಸಾಂವಿಧಾನಿಕ ಸಂಸ್ಥೆ ಎಂಬ ವಿಶೇಷಣಗಳನ್ನೂ ಸುಪ್ರೀಂಕೋರ್ಟ್‌ಗೆ ಆರೋಪಿಸಲಾಗುತ್ತದೆ. ಆದರೆ ವಾಸ್ತವ ಏನು?

ಸುಪ್ರೀಂ ಕೋರ್ಟ್ ಮತ್ತು ಒಟ್ಟು ಭಾರತೀಯ ನ್ಯಾಯಾಂಗ ವ್ಯವಸ್ಥೆಯ ಕುರಿತ ವಸ್ತುನಿಷ್ಠ ವಿಶ್ಲೇಷಣೆಗಳ ಕೊರತೆಯಲ್ಲಿ ಭಾರತದ ಅತ್ಯುನ್ನತ ನ್ಯಾಯಪೀಠಕ್ಕೆ ಉತ್ಪ್ರೇಕ್ಷಿತ ಗುಣಗಳುಳ್ಳ ವ್ಯಕ್ತಿತ್ವವೊಂದು ಪ್ರಾಪ್ತವಾಗಿದೆ. ಸುಪ್ರೀಂ ಕೋರ್ಟ್‌ಗೆ ಇಂಥದ್ದೊಂದು ಸಾಂಸ್ಥಿಕ ವ್ಯಕ್ತಿತ್ವವನ್ನು ನೀಡುವುದರ ಹಿಂದೆ ವಕೀಲರಿದ್ದಾರೆ, ನ್ಯಾಯಾಧೀಶರಿದ್ದಾರೆ. ಹಾಗೆಯೇ ಕೆಲವು ವಿದ್ವಾಂಸರು ಹಾಗೂ ರಾಜಕೀಯ ವಿಶ್ಲೇಷಕರು ಕೂಡಾ ವಿಮರ್ಶೆಯನ್ನೇ ಮರೆತ ಮಾಧ್ಯಮಗಳ ಜೊತೆ ಸೇರಿಕೊಂಡಿದ್ದಾರೆ. ಇವರೆಲ್ಲರೂ ಬೆರಳೆಣಿಕೆಯ ಪ್ರತಿಷ್ಠಿತ ಪ್ರಕರಣಗಳಲ್ಲಿ ನ್ಯಾಯಾಲಯ ಹೇಳಿದ್ದನ್ನು ಸಂಭ್ರಮಿಸುತ್ತಾ ಸುಪ್ರೀಂ ಕೋರ್ಟ್‌ನ ನಿರ್ವಹಣೆಯನ್ನು ವಿಶ್ಲೇಷಿಸುವ ಸಾಂಸ್ಥಿಕ ಮೌಲ್ಯಮಾಪನ ಮಾದರಿಯನ್ನು ಅಭಿವೃದ್ಧಿ ಪಡಿಸುವಲ್ಲಿ ವಿಫಲರಾಗಿದ್ದಾರೆ. ಅಂಕಿ–ಅಂಶ ಆಧಾರಿತ ವಸ್ತುನಿಷ್ಠ ವಿಶ್ಲೇಷಣೆಯೊಂದರ ಎದುರು ಸುಪ್ರೀಂಕೋರ್ಟ್‌ಗೆ ಆರೋಪಿಸಲಾಗಿರುವ ಎಲ್ಲಾ ವಿಶೇಷಣಗಳೂ ಪ್ರಶ್ನಾರ್ಹವಾಗಿ ಬಿಡುತ್ತವೆ. ಅಷ್ಟೇ ಅಲ್ಲ ಇಂಥದ್ದೊಂದು ವಿಶ್ಲೇಷಣೆ ಸುಪ್ರೀಂಕೋರ್ಟ್‌ನ ಸಾಂಸ್ಥಿಕ ವ್ಯಕ್ತಿತ್ವದ ಕುರಿತಂತೆ ಇರುವ ಸ್ಥಾಪಿತ ಗ್ರಹೀತಗಳನ್ನು ಸುಳ್ಳೆಂದು ಸಾಬೀತು ಮಾಡಿದರೂ ಆಶ್ಚರ್ಯ ಪಡಬೇಕಾಗಿಲ್ಲ.

ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ (ಎಪಿಯು) ಕಾನೂನು, ಆಡಳಿತ ಮತ್ತು ಅಭಿವೃದ್ಧಿ ವಿಭಾಗವು ನಿಕ್ ರಾಬಿನ್‌ಸನ್ ಅವರ 'ಅಂಕಿ–ಸಂಖ್ಯೆಗಳಲ್ಲಿ ಭಾರತೀಯ ಸುಪ್ರೀಂ ಕೋರ್ಟ್' ಎಂಬ ಸಂಶೋಧನಾ ಪ್ರಬಂಧವನ್ನು ಹೊರತಂದಿದೆ. ಸುಪ್ರೀಂ ಕೋರ್ಟ್‌ನ ಕಾರ್ಯನಿರ್ವಹಣೆಯ ಕುರಿತಂತೆ ನಿಕ್ ರಾಬಿನ್‌ಸನ್ ಅವರು ನಡೆಸುತ್ತಿರುವ ಸಂಶೋಧನೆಯ ಪ್ರಾಥಮಿಕ ಫಲಿತಾಂಶಗಳನ್ನು ವಿವರಿಸುತ್ತಿರುವ ಈ ಪ್ರಬಂಧ 1993ರಿಂದ 2011ರ ತನಕ ಸುಪ್ರೀಂ ಕೋರ್ಟ್ ನಿರ್ವಹಿಸಿದ ಪ್ರಕರಣಗಳನ್ನು ವಿಶ್ಲೇಷಿಸಿ ಮೂರು ಬಹುಮುಖ್ಯ ವಾಸ್ತವಾಂಶಗಳನ್ನು ಕಂಡುಕೊಂಡಿದೆ.

ಒಂದು: ದೆಹಲಿ ಮತ್ತು ಹೆಚ್ಚು ತಲಾ ಜಿಎನ್‌ಪಿ (ಒಟ್ಟು ರಾಷ್ಟ್ರೀಯ ಉತ್ಪನ್ನ) ಇರುವ ರಾಜ್ಯಗಳ ಜನರು ದೇಶದ ಇತರ ಪ್ರದೇಶಗಳ ಜನರಿಗಿಂತ ಹೆಚ್ಚಾಗಿ ಸುಪ್ರೀಂಕೋರ್ಟ್‌ಗೆ ವ್ಯಾಜ್ಯಗಳನ್ನು ಕೊಂಡೊಯ್ಯುತ್ತಾರೆ. ಎರಡು: ನ್ಯಾಯಾಲಯದ ಪ್ರಕರಣಗಳ ಯಾದಿಯಲ್ಲಿ ಶೋಷಿತ ಮತ್ತು ಬಡ ಜನತೆಯ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಹಕ್ಕುಗಳ ರಕ್ಷಣೆಗೆ ಸಂಬಂಧಿಸಿದ ಪ್ರಕರಣಗಳಿಗಿಂತ ಹೆಚ್ಚಾಗಿ ಸಾರ್ವಜನಿಕ ಸ್ವಾಮ್ಯದ ಉದ್ಯಮಗಳ ನೌಕರರಿಗೆ ಸಂಬಂಧಿಸಿದ ಪ್ರಕರಣಗಳು, ತೆರಿಗೆ ಮತ್ತು ಆಸ್ತಿ ವ್ಯಾಜ್ಯಗಳಿವೆ. ಮೂರು: ನ್ಯಾಯಾಲಯಕ್ಕೆ ಬರುವ ಅರ್ಜಿಗಳಲ್ಲಿ ಶೇಕಡಾ 84ರಷ್ಟು ವಿಶೇಷಾನುಮತಿ ಅರ್ಜಿಗಳು (ಸ್ಪೆಷಲ್ ಲೀವ್ ಪಿಟಿಷನ್). ಅಂದರೆ ಸಿವಿಲ್ ಮತ್ತು ಕ್ರಿಮಿನಲ್ ವಿವೇಚನಾ ಪರಿಶೀಲನೆಯ ವ್ಯಾಪ್ತಿಗೆ ಬರುವ ಪ್ರಕರಣಗಳು. ಇದು ಹಕ್ಕುಗಳ ರಕ್ಷಣೆಯ ವ್ಯಾಪ್ತಿಯಲ್ಲಿ ಬರುವ ರಿಟ್ ಅರ್ಜಿಗಳ ಸಂಖ್ಯೆಯನ್ನು ಗಮನಾರ್ಹ ಪ್ರಮಾಣದಲ್ಲಿ ಕುಸಿಯುವಂತೆ ಮಾಡಿದೆ. ಪ್ರಸ್ತುತ ರಿಟ್ ಅರ್ಜಿಗಳ ಪ್ರಮಾಣವಿರುವುದು ಕೇವಲ ಶೇಕಡಾ 2 ರಷ್ಟು.

ನಿಕ್ ರಾಬಿನ್‌ಸನ್ ಅವರು ಗುರುತಿಸಿರುವ ಈ ಮೂರೂ ಅಂಶಗಳು ಈಗಾಗಲೇ ಸ್ಥಾಪಿತವಾಗಿರುವ ಸುಪ್ರೀಂ ಕೋರ್ಟ್‌ನ ಸಾಂಸ್ಥಿಕ ವ್ಯಕ್ತಿತ್ವವನ್ನು ಪುನರ್ ಮೌಲ್ಯಮಾಪನಕ್ಕೆ ಒಳಪಡಿಸುವ ಅಗತ್ಯವನ್ನು ಸೂಚಿಸುತ್ತಿವೆ.

2011ರ ಅಂಕಿ ಅಂಶಗಳು ಹೇಳುತ್ತಿರುವಂತೆ ಸುಪ್ರೀಂ ಕೋರ್ಟ್ ತಲುಪಿದ ಮೇಲ್ಮನವಿಗಳಲ್ಲಿ ಶೇಕಡಾ 40ರಷ್ಟು ದೆಹಲಿ, ಮುಂಬೈ ಹಾಗೂ ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್‌ಗಳಿಂದ ಬಂದಿವೆ. ಬಿಹಾರ, ಕೊಲ್ಕತ್ತ, ಒಡಿಶಾ, ಉತ್ತರಾಂಚಲ, ಛತ್ತೀಸ್‌ಗಡ, ಜಾರ್ಖಂಡ್, ಅಸ್ಸಾಂ, ಜಮ್ಮು ಮತ್ತು ಕಾಶ್ಮೀರ ಹಾಗೂ ಸಿಕ್ಕಿಂ ರಾಜ್ಯಗಳಿಂದ ಬಂದ ಮೇಲ್ಮನವಿಗಳನ್ನೆಲ್ಲಾ ಒಟ್ಟುಗೂಡಿಸಿದರೂ ಅವುಗಳ ಪ್ರಮಾಣ ಶೇಕಡಾ 13ನ್ನು ಮೀರುವುದಿಲ್ಲ. ಅಂದರೆ ದೇಶದ ಶ್ರೀಮಂತವೆನಿಸಿಕೊಂಡ ಭಾಗದಿಂದ ಹೆಚ್ಚಿನ ವ್ಯಾಜ್ಯಗಳು ಸುಪ್ರೀಂ ಕೋರ್ಟ್ ತಲುಪುತ್ತವೆ. ಅಪರಾಧಿಕ ಪ್ರಕರಣಗಳನ್ನು ಹೊರತು ಪಡಿಸಿದರೆ ನ್ಯಾಯಾಲಯ ಹೆಚ್ಚಾಗಿ ನಿರ್ವಹಿಸಿರುವುದು ತೆರಿಗೆ (ಶೇ.14), ಆಸ್ತಿ (ಶೇ.13), ಸಾರ್ವಜನಿಕ ಸ್ವಾಮ್ಯದ ಉದ್ಯಮಗಳ ಸೇವಾ ಸಂಬಂಧಿ ಕಾನೂನು (ಶೇ.20) ವ್ಯಾಜ್ಯಗಳನ್ನು. ಈ ಬಗೆಯ ಅರ್ಜಿಗಳು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿರುವುದಷ್ಟೇ ಈ ಸ್ಥಿತಿಗೆ ಕಾರಣವಲ್ಲ. ಪೂರ್ಣ ಪರಿಶೀಲನೆಗೆ ಸುಪ್ರೀಂ ಕೋರ್ಟ್ ಕೈಗೆತ್ತಿಕೊಳ್ಳುವ ಅರ್ಜಿಗಳ ಸಂಖ್ಯೆಯಲ್ಲಿ ಸಾಮಾನ್ಯ ಸಿವಿಲ್ (ಶೇ.9) ಮತ್ತು ವೈಯಕ್ತಿಕ ಕಾನೂನು ಪ್ರಕರಣಗಳಿಗೆ (ಶೇ.9) ಹೋಲಿಸಿದರೆ ಕಂಪೆನಿ ಕಾನೂನು (ಶೇ.17) ಮತ್ತು ಮಧ್ಯಸ್ಥಿಕೆ ಪ್ರಕರಣಗಳದ್ದೇ (ಶೇ.15) ದೊಡ್ಡಪಾಲು.

ಈ ಮೊದಲೇ ಹೇಳಿದಂತೆ ರಿಟ್ ಅರ್ಜಿಗಳ ಸಂಖ್ಯೆಯಲ್ಲಿ ಗಮನಾರ್ಹ ಪ್ರಮಾಣದ ಇಳಿಕೆ ಕಂಡುಬಂದಿದೆ. 1985ರಲ್ಲಿ ಒಟ್ಟು ಪ್ರಕರಣಗಳ ಸಂಖ್ಯೆಯ ಶೇಕಡಾ 41ರಷ್ಟಿದ್ದ ರಿಟ್ ಅರ್ಜಿಗಳು ಪ್ರಮಾಣ 2011ರ ವೇಳೆಗೆ ಕೇವಲ ಶೇಕಡಾ 2ಕ್ಕೆ ಇಳಿದಿದೆ. ಈ ಅಂಕಿ–ಅಂಶಗಳನ್ನು ಮುಂದಿಟ್ಟುಕೊಂಡು ವಿಶ್ಲೇಷಿಸಿದರೆ ಮೂಲಭೂತ ಹಕ್ಕುಗಳ ರಕ್ಷಣೆ ಎಂಬುದು ಸುಪ್ರೀಂ ಕೋರ್ಟ್‌ನ ಒಟ್ಟು ಕೆಲಸದ ಅತಿ ಸಣ್ಣ ಭಾಗವಷ್ಟೇ ಆಗಿ ಉಳಿದಿದೆ.

ನ್ಯಾಯಾಂಗ ವ್ಯವಸ್ಥೆಯ ಸುಧಾರಣೆಗೆ ಸಂಬಂಧಿಸಿದ ಸಮಕಾಲೀನ ಚರ್ಚೆಗಳೆಲ್ಲವುಗಳ ಪ್ರಾಥಮಿಕ ಕಾಳಜಿ ನ್ಯಾಯದಾನ ವ್ಯವಸ್ಥೆಯಲ್ಲಿ ಕಂಡುಬರುವ ನಿಧಾನಗತಿ ಮತ್ತು ಬಾಕಿ ಉಳಿದಿರುವ ಪ್ರಕರಣಗಳಿಗೆ ಸೀಮಿತವಾಗಿವೆ. ಎಪಿಯು ನಡೆಸಿದ ಸಂಶೋಧನೆಯ ಫಲಿತಾಂಶಗಳು ಸೂಚಿಸುತ್ತಿರುವಂತೆ ಹೈಕೋರ್ಟ್ ಮತ್ತು ಕೆಳ ನ್ಯಾಯಾಲಯಗಳಿಗೆ ಹೋಲಿಸಿದರೆ ಸುಪ್ರೀಂ ಕೋರ್ಟ್‌ನಲ್ಲಿ ಪ್ರಕರಣಗಳ ಸಂಖ್ಯೆ ಬಹಳ ತೀವ್ರಗತಿಯಲ್ಲಿ ಹೆಚ್ಚಾಗುತ್ತಿದೆ. 2005ರಿಂದ 2010ರ ನಡುವಣ ಅವಧಿಯಲ್ಲಿ ಹೈಕೋರ್ಟ್ ಮತ್ತು ಕೆಳ ನ್ಯಾಯಾಲಯಗಳಲ್ಲಿ ಪ್ರಕರಣ ಸಂಖ್ಯೆ ಕ್ರಮವಾಗಿ ಶೇಕಡಾ 25 ಮತ್ತು ಶೇಕಡಾ 4ರ ದರದಲ್ಲಿ ಹೆಚ್ಚಾಗಿದೆ. ಆದರೆ ಇದೇ ಅವಧಿಯಲ್ಲಿ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ರೂಪದಲ್ಲಿ ತಲುಪಿದ ಪ್ರಕರಣಗಳ ಸಂಖ್ಯೆ ಶೇಕಡಾ 52ರಷ್ಟು (ಸುಮಾರು 43,000 ಪ್ರಕರಣಗಳು) ಹೆಚ್ಚಾಗಿದೆ. ಇದೇ ಅವಧಿಯಲ್ಲಿ ಸ್ವತಃ ಸುಪ್ರೀಂ ಕೋರ್ಟ್ ವಿಚಾರಣೆಗೆ ಸ್ವೀಕರಿಸಿದ ಪ್ರಕರಣಗಳ ಸಂಖ್ಯೆ ಶೇಕಡಾ 70ರಷ್ಟು (8824 ಪ್ರಕರಣಗಳು) ಏರಿಕೆ ಕಂಡಿದೆ. ಈ ಅಂಕಿ ಅಂಶಗಳೇ ಸುಪ್ರೀಂ ಕೋರ್ಟ್ ಪ್ರಕರಣಗಳನ್ನು ಇತ್ಯರ್ಥಗೊಳಿಸುವ ವೇಗವನ್ನು ಹೆಚ್ಚಿಸಿಕೊಂಡರೂ ಬಾಕಿ ಉಳಿಯುವ ಪ್ರಕರಣಗಳ ಸಂಖ್ಯೆ ಹೇಗೆ ಬೆಳೆಯುತ್ತಲೇ ಹೋಗುತ್ತದೆ ಎಂಬುದಕ್ಕೆ ಸಾಕ್ಷಿಯಾಗುತ್ತವೆ.

ಹೆಚ್ಚು ನ್ಯಾಯಾಧೀಶರು, ಹೆಚ್ಚಿನ ಸಂಖ್ಯೆಯ ನ್ಯಾಯಾಲಯಗಳು ಮತ್ತು ಹೆಚ್ಚು ಹೆಚ್ಚು ತಂತ್ರಜ್ಞಾನ ಬಳಕೆ ಈ ಬಾಕಿ ಉಳಿಯುತ್ತಿರುವ ಪ್ರಕರಣಗಳ ಸಂಖ್ಯೆಗೆ ಪರಿಹಾರವೆಂಬಂತೆ ಬಿಂಬಿಸಿ ಕಾರ್ಯರೂಪಕ್ಕೆ ತರಲಾಗುತ್ತಿದೆ. ಭಾರತೀಯ ನ್ಯಾಯಾಂಗ ವ್ಯವಸ್ಥೆಯ ಸುಧಾರಣಾ ನೀತಿ 1925ರ ನ್ಯಾಯಮೂರ್ತಿ ರ್‍ಯಾನ್ಕಿನ್ ಸಮಿತಿ ವರದಿ ನೀಡಿದ ವಿಶ್ಲೇಷಣೆ ಮತ್ತು ಸಲಹೆಗಳನ್ನು ಪುನರಾವರ್ತಿಸುತ್ತಿರುತ್ತದೆ. ಈ ಪ್ರಕ್ರಿಯೆಯಲ್ಲಿ ಹೊಸ ಅಂಕಿ–ಅಂಶಗಳು ಇದ್ದರೂ ಅದರ ಪ್ರಮಾಣ ಕನಿಷ್ಠ. ವಸ್ತುನಿಷ್ಠ ವಿಶ್ಲೇಷಣೆಯಂತೂ ಇಲ್ಲವೇ ಇಲ್ಲ. ಪರಿಣಾಮವಾಗಿ 1950ರಲ್ಲಿ ಕೇವಲ ಎಂಟರಷ್ಟಿದ್ದ ಸುಪ್ರೀಂ ಕೋರ್ಟ್ ನ್ಯಾಯಾಧೀಶರ ಸಂಖ್ಯೆ 2012ರ ಹೊತ್ತಿಗೆ 31ಕ್ಕೆ ಏರಿತೇ ಹೊರತು ಪ್ರಕರಣಗಳ ವಿಲೇವಾರಿಯ ವೇಗ ಹೆಚ್ಚಾಗಲಿಲ್ಲ, ಬಾಕಿ ಪ್ರಕರಣಗಳ ಪ್ರಮಾಣವೂ ಕಡಿಮೆಯಾಗಲಿಲ್ಲ, ಆಗುವ ಸೂಚನೆಯ ಕಾಣಿಸುತ್ತಿಲ್ಲ. ಕೇವಲ ಸುಪ್ರೀಂ ಕೋರ್ಟ್‌ನ ನ್ಯಾಯಾಧೀಶರ ಸಂಖ್ಯೆಯನ್ನು ಹೆಚ್ಚಿಸುವುದು ಒಂದು ಅರ್ಥಹೀನ ಪರಿಹಾರ ಮಾತ್ರ.

ಎಪಿಯುನ ಸಂಶೋಧನೆ ಹೇಳುವಂತೆ ದೊಡ್ಡ ಸಂಖ್ಯೆಯ ನ್ಯಾಯಾಧೀಶರಿರುವ ನ್ಯಾಯಾಲಯದಲ್ಲಿ ಎರಡು ಅಥವಾ ಮೂವರು ನ್ಯಾಯಾಧೀಶರ ಹಲವು ಸಣ್ಣ ಪೀಠಗಳಿರುವುದು ವಾಜ್ಯಗಳ ವಿಲೇವಾರಿಯ ವೇಗವನ್ನು ಹೆಚ್ಚಿಸುವುದಿಲ್ಲ ಅಥವಾ ಬಾಕಿ ಪ್ರಕರಣಗಳ ಸಂಖ್ಯೆಯನ್ನೂ ಕಡಿಮೆ ಮಾಡುವುದಿಲ್ಲ. ಬದಲಿಗೆ ನಿಯಮಗಳ ಕುರಿತಂತೆ ಇರುವ ನಿಸ್ಸಂದಿಗ್ಧತೆಯನ್ನು ಇಲ್ಲವಾಗಿಸಿ ತೀರ್ಪುಗಳ ಸುಸಂಬದ್ಧತೆಯನ್ನು ದುರ್ಬಲಗೊಳಿಸಿಬಿಡುತ್ತದೆ. ಇದು ಸುಪ್ರೀಂ ಕೋರ್ಟ್‌ನ ಮಟ್ಟಿಗೆ ಬಹುಮುಖ್ಯವಾಗುವ ಪೂರ್ವನಿದರ್ಶನಗಳ ಮಹತ್ವವನ್ನು ಕಡಿಮೆ ಮಾಡಿ ಮತ್ತೆ ಮತ್ತೆ ಕಕ್ಷಿದಾರರು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸುವ ಪ್ರವೃತ್ತಿಯನ್ನು ಹೆಚ್ಚಿಸುತ್ತದೆ. ಇದರ ಪರಿಣಾಮ ಸುಪ್ರೀಂ ಕೋರ್ಟ್‌ಗೆ ಬರುವ ಪ್ರಕರಣಗಳ ಸಂಖ್ಯೆಯ ಹೆಚ್ಚಳದಲ್ಲಿ ಪ್ರತಿಬಿಂಬಿಸುತ್ತದೆ.

ರಾಜೀವ್ ಧವನ್ ಅವರ 'ಸುಪ್ರೀಂ ಕೋರ್ಟ್ ಅಂಡರ್ ಸ್ಟ್ರೈನ್: ಚಾಲೆಂಜ್ ಆಫ್ ಅರಿಯರ್ಸ್ 1978' ಮತ್ತು ಬಿಬೇಕ್ ದೇಬ್ರಾಯ್ ಮತ್ತು ಆರ್ನಬ್ ಹಝಾರ ಅವರ 'ಜ್ಯುಡಿಷಿಯಲ್ ರಿಫಾರ್ಮ್ಸ್ ಇನ್ ಇಂಡಿಯಾ 2007'ಗಳು ನ್ಯಾಯಾಂಗ ವ್ಯವಸ್ಥೆಯ ಸುಧಾರಣೆಗೆ ಅಗತ್ಯವಿರುವ ವಸ್ತುನಿಷ್ಠ ಮತ್ತು ಸೂಕ್ಷ್ಮ ವಿಶ್ಲೇಷಣೆಗಳ ಮಾರ್ಗವೊಂದನ್ನು ಕಂಡುಕೊಳ್ಳಲು ಅಗತ್ಯವಿರುವ ತಳಹದಿಯನ್ನು ಒದಗಿಸುತ್ತವೆ. ನಿಕ್ ರಾಬಿನ್ಸನ್ ಅವರ ಸಂಶೋಧನೆಯ ಪ್ರಾಥಮಿಕ ಫಲಿತಾಂಶಗಳೂ ಕೂಡಾ ನ್ಯಾಯಾಂಗೀಯ ಸುಧಾರಣೆಗೆ ಸಂಬಂಧಿಸಿದಂತೆ ವಸ್ತುನಿಷ್ಠ ನಿಲುವೊಂದರ ಅಗತ್ಯವನ್ನು ಸೂಚಿಸುತ್ತಿದೆ. ಜೊತೆಗೆ ಸುಪ್ರೀಂ ಕೋರ್ಟ್‌ನ ಸಾಂಸ್ಥಿಕ ಗುಣದ ಬಗ್ಗೆ ಸಾರ್ವಜನಿಕರಿಗೆ ಇರುವ ತಪ್ಪು ಕಲ್ಪನೆಯನ್ನು ಹೋಗಲಾಡಿಸಿ ಪರಿಣಾಮಕಾರಿ ಸುಧಾರಣೆಗೆ ಅಗತ್ಯವಿರುವ ಮಾರ್ಗದರ್ಶನವನ್ನು ನೀಡುತ್ತಿದೆ.

ಕೇವಲ ದೃಷ್ಟಾಂತಗಳು ಮತ್ತು ಮೇಲ್ಪದರದ ಗ್ರಹಿಕೆಗಳ ಆಧಾರದ ಮೇಲೆ ಸುಧಾರಣೆಗಳನ್ನು ಯೋಜಿಸುವ ವಿಧಾನವನ್ನು ಕೈಬಿಟ್ಟು ವಾಸ್ತವವನ್ನು ಅರ್ಥ ಮಾಡಿಕೊಂಡ ವಸ್ತುನಿಷ್ಠ ವಿಧಾನವೊಂದನ್ನು ಅಳವಡಿಸಿಕೊಳ್ಳದೇ ಹೋದರೆ ಭಾರತೀಯ ನ್ಯಾಯಾಂಗ ವ್ಯವಸ್ಥೆ ಮತ್ತು ಸುಪ್ರೀಂ ಕೋರ್ಟ್‌ನ ಸುಧಾರಣೆ ಸಾಧ್ಯವಾಗದು. ಆಸ್ಟ್ರೇಲಿಯಾದ ವೈಟ್ ಇಂಡಸ್ಟ್ರೀಸ್ ಲಿಮಿಟೆಡ್ ಮತ್ತು ಭಾರತ ಸರ್ಕಾರದ ನಡುವಣ ವ್ಯಾಜ್ಯಕ್ಕೆ ಸಂಬಂಧಿಸಿದಂತೆ ತೀರ್ಪು ನೀಡಿದ ವಿಶ್ವಸಂಸ್ಥೆಯ ಅಂತಾರಾಷ್ಟ್ರೀಯ ವ್ಯಾಪಾರ ಕಾನೂನುಗಳ ಆಯೋಗ (ಯುಎನ್‌ಸಿಐಟಿಆರ್‌ಎಲ್) 'ವೈಟ್ ಸಂಸ್ಥೆಯ ವ್ಯಾಪ್ತಿ ಸಂಬಂಧಿ ಮನವಿಯನ್ನು ನಿರ್ವಹಿಸಲು ಭಾರತೀಯ ನ್ಯಾಯಾಂಗ ವ್ಯವಸ್ಥೆಗೆ ಒಂಬತ್ತು ವರ್ಷಗಳಲ್ಲಿ ಸಾಧ್ಯವಾಗಿಲ್ಲ ಎಂಬ ತೀರ್ಮಾನಕ್ಕೆ ಬರಲು ಅಡ್ಡಿಯಾಗುವ ಏನೂ ನ್ಯಾಯಮಂಡಳಿಗೆ ಕಾಣುತ್ತಿಲ್ಲ. ಹಾಗೆಯೇ ಸುಪ್ರೀಂ ಕೋರ್ಟ್ ಈ ಕುರಿತ ವಿಚಾರಣೆಯನ್ನು ಕೈಗೆತ್ತಿಕೊಳ್ಳಲು ಐದು ವರ್ಷ ಅನಗತ್ಯವಾಗಿ ಕಾಯಿಸಿರುವುದು ವೈಟ್ ಸಂಸ್ಥೆಗೆ ಭಾರತವೇ ಸ್ವಯಂ ಪ್ರೇರಿತವಾಗಿ ನೀಡಿದ ಹಕ್ಕು ಚಲಾವಣೆಯ ಖಾತರಿಯನ್ನು ಅಪ್ರಸ್ತುತಗೊಳಿಸುತ್ತದೆ' ಎಂದಿತ್ತು. ಈ ಪ್ರಕರಣದಲ್ಲಿ ಭಾರತ ಸರ್ಕಾರವು ಸುಮಾರು 50 ಕೋಟಿ ರೂಪಾಯಿಗಳನ್ನು ವೈಟ್ ಇಂಡಸ್ಟ್ರೀಸ್ ಸಂಸ್ಥೆ ಪರಿಹಾರವಾಗಿ ನೀಡಿದ್ದನ್ನು ಮಾಧ್ಯಮಗಳು ವರದಿ ಮಾಡಿದ್ದವು. ಈಗಿರುವ ಸ್ಥಾಪಿತ ಮಾದರಿಯಲ್ಲೇ ನ್ಯಾಯಾಂಗ ವ್ಯವಸ್ಥೆಯ ಸುಧಾರಣೆಯನ್ನು ಮಾಡಲು ಹೊರಡುವುದು ಜನಸಾಮಾನ್ಯನ ತೆರಿಗೆ ಹಣಕ್ಕೆ ಹೇಗೆ ಮಾರಕವಾಗಿ ಪರಿಣಮಿಸುತ್ತದೆ ಎಂಬುದಕ್ಕೆ ಮೇಲಿನ ಘಟನೆ ಒಳ್ಳೆಯ ಉದಾಹರಣೆ.

(ಲೇಖಕರಿಬ್ಬರೂ ವಕೀಲರು ಮತ್ತು ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಪ್ರಾಧ್ಯಾಪಕರು)

ಕಾರಣಾಂತರಗಳಿಂದ 'ಅನಾವರಣ' ಅಂಕಣ ಇಂದು ಪ್ರಕಟವಾಗುತ್ತಿಲ್ಲ.

ವಾಚಕರ ವಾಣಿ

ಹಂಪೆಯ ಕಲ್ಲಿನ ತೇರು ಅಳಿವಿನಂಚಿಗೆ

ವಿಶ್ವವಿಖ್ಯಾತ ಹಂಪೆಯ 'ಕಲ್ಲಿನ ತೇರು' ಬಿರುಕುಬಿಟ್ಟಿದೆ. ಇತ್ತೀಚೆಗಷ್ಟೇ 'ಅಕ್ಕ–ತಂಗಿ'ಯರ ಗುಂಡು ಖ್ಯಾತಿಯ ಹೆಬ್ಬಂಡೆಗಳು ತುಂಡು ತುಂಡಾಗಿ ನೆಲಕ್ಕೆ ಬಿದ್ದವು. ವಿಶ್ವಪರಂಪರೆಯ ತಾಣ ಹಂಪೆಯ ಸ್ಮಾರಕಗಳನ್ನು ವೈಜ್ಞಾನಿಕವಾಗಿ ಸಂರಕ್ಷಿಸುವುದು ಅಗತ್ಯ. ಹಂಪೆ–ಆನೆಗುಂದಿ ಭಾಗದ ಬೆಟ್ಟ ಗುಡ್ಡಗಳಲ್ಲಿನ ಬಂಡೆಕಲ್ಲುಗಳಲ್ಲಿನ ಗುಹೆ–ಗವಿಗಳು ಶಿಲಾಯುಗದ ಮಾನವರ ಆವಾಸಸ್ಥಾನವಾಗಿದ್ದು ಇಲ್ಲಿನ ಬಂಡೆಗಳ ಮೇಲೆ ಆದಿಮಾನವರು ಗೀಚಿದ ರೇಖಾ ಚಿತ್ರಗಳು ಈಗಲೂ ಇವೆ. ಈ ಗುಹೆಗಳಿಂದ ಹೊರಬಂದ ಆದಿಮಾನವ ತುಂಗಭದ್ರ ನದಿ ಕೊಳ್ಳದಲ್ಲಿ ನೆಲೆ ಕಂಡುಕೊಂಡು ಆಹಾರ ಸಂಗ್ರಹಣೆ, ಬೇಟೆ, ಕೃಷಿಯಿಂದ ಬುಡಕಟ್ಟು ಜೀವನ ಆರಂಭಿಸಿ ಊರು ಹಾಗೂ ನಾಗರಿಕತೆಯ ಪಟ್ಟಣ ಕಟ್ಟಿರುವ ಸಾಧ್ಯತೆ ಇದೆ. ಹಂಪೆ ಸಮೀಪದ 'ಮಸ್ಕಿ'ಯಿಂದ ಹೋದ ಬಂಗಾರವು ಸಿಂಧೂ ಕೊಳ್ಳದ 'ಹರಪ್ಪಾ' ನಾಗರಿಕರ ಆಭರಣಗಳಲ್ಲಿ ಬಳಕೆಯಾಗಿದೆ. ಇಲ್ಲಿನ 'ಸಂಗನಕಲ್ಲಿ'ನ ಶಿಲಾಯುಧಗಳು ನಂತರದ ಈ ಭಾಗದ ಕಬ್ಬಿಣದ ಆಯುಧಗಳು ಪ್ರಾಚೀನ ಕಾಲದಲ್ಲೆ ಉತ್ತರ ಭಾರತಕ್ಕೆ ರವಾನೆಯಾದದ್ದನ್ನು ತಜ್ಞರು ಸಂಶೋಧಿಸಿದ್ದಾರೆ.

ಯಾವುದೇ ಎಗ್ಗು–ಸಿಗ್ಗಿಲ್ಲದೆ ಹಂಪೆ–ಆನೆಗುಂದಿ ಭಾಗದಲ್ಲಿ ನಡೆಯುವ ಕಲ್ಲು ಗಣಿಗಾರಿಕೆ ಇಲ್ಲಿನ ಸ್ಮಾರಕಗಳಿಗೆ ಪ್ರಾಚೀನ ಕುರುಹುಗಳಿಗೆ ಧಕ್ಕೆ ತಂದಿದೆ. ಇಲ್ಲಿನ ಬೆಟ್ಟ ಗುಡ್ಡಗಳು ಮುಕ್ಕಾಗುತ್ತಿವೆ. ತುಂಗಭದ್ರೆಯ ಸಿಹಿನೀರು ಕಾರ್ಖಾನೆಯ ತ್ಯಾಜ್ಯದಿಂದಾಗಿ ಕಲುಷಿತವಾಗಿದೆ. ಪ್ರಾಚೀನ, ಐತಿಹಾಸಿಕ ತಾಣಗಳನ್ನು ಪುರಾತತ್ವ ಇಲಾಖೆ, ವೈಜ್ಞಾನಿಕವಾಗಿ ಜೀರ್ಣೋದ್ಧಾರ ಮಾಡಿಸಬೇಕಾಗಿದೆ.

-ಕರೇಕಲ್ ಶಂಕರ್, ಕಂಪ್ಲಿ

ಮೈತ್ರಿಯೇ ಸಂಜೀವಿನಿ!

2000 ರಿಂದ 2008 ರವರೆಗೆ ರಾಜ್ಯದ ಇಬ್ಬರು ಮಾಜಿ ಮುಖ್ಯಮಂತ್ರಿಗಳ ವಿರುದ್ಧದ ಆಪಾದನೆಗಳ ತನಿಖೆ ನಡೆಸಲು ಸಂಬಂಧಿಸಿದ ದಾಖಲಾತಿಗಳು ಲೋಕಾಯುಕ್ತಕ್ಕೆ 'ದೊರೆಯಲೇ ಇಲ್ವಂತೆ!"

ಆದರೆ ಮತ್ತೊಂದು ರಾಜ್ಯದ ಮಾಜಿ ಮುಖ್ಯಮಂತ್ರಿ ವಿರುದ್ಧದ ಪ್ರಕರಣವು (1989–90) ಇಪ್ಪತ್ತಮೂರು ವರ್ಷದಷ್ಟು ಹಿಂದಿನದಾಗಿದ್ದರೂ ಇನ್ನೇನು ಎರಡು ದಿನಗಳಲ್ಲಿ ನೂತನ ಮುಖ್ಯಮಂತ್ರಿಗಳಾಗಿ ಪ್ರಮಾಣ ವಚನ ಸ್ವೀಕರಿಸ ಬೇಕು ಎನ್ನುವಾಗ ಅವರ ವಿರುದ್ಧದ ಆ ಪ್ರಕರಣ 'ಖುಲಾಸೆ' ಆಯಿತಂತೆ!

ಇದರಿಂದ; ವೈಯುಕ್ತಿಕದ್ದೇ ಆಗಿರಲಿ, ಪ್ರತಿಪಕ್ಷ ಸರ್ಕಾರಗಳೇ ಆಗಿರಲಿ ಯಾವುದೇ ಆಪಾದನೆಗಳಿಗೆ ಒಳಪಟ್ಟಿದ್ದರೂ, ಅಮಾನತ್‌ಗೊಂಡಿದ್ದರೂ, ವಿಚಾರಣೆ ತೀರ್ಪು ತಡೆಹಿಡಿದಿದ್ದರೂ ಅವುಗಳಿಂದ ಬಂಧವಿಮುಕ್ತರಾಗಬೇಕಾದರೆ 'ಯು.ಪಿ.ಎ. ಮೈತ್ರಿಯೇ ಸಂಜೀವಿನಿ' ಅಂತಾ ಆಯ್ತಲ್ಲಾ!

-ಎನ್.ಆರ್. ನಾಡಿಗ್, ಬೆಂಗಳೂರು

ಗುಲಾಬಿ ಗ್ಯಾಂಗ್

ದೆಹಲಿಯಲ್ಲಿ ನಡೆದ ಅತ್ಯಾಚಾರದ ನಂತರ ಹಲವಾರು ಘಟನೆಗಳು ನಡೆಯುತ್ತಿವೆ. ನಾಯಕರು ಅಪ್ರಬುದ್ಧ ಹೇಳಿಕೆಗಳನ್ನು ಕೊಡುತ್ತಿದ್ದಾರೆ. ವಿದ್ಯಾರ್ಥಿಗಳು ನ್ಯಾಯ ಕೇಳುತ್ತಿದ್ದಾರೆ.

ನಾನು ಒಂದು ವೃತ್ತಪತ್ರಿಕೆಯಲ್ಲಿ ಓದಿದ್ದೆ, ಉತ್ತರ ಭಾರತದಲ್ಲಿ "ಗುಲಾಬಿ ಗ್ಯಾಂಗ್" ಎಂಬ ಹೆಂಗಸರ ಗುಂಪು, ಅತ್ಯಾಚಾರಿಗಳಿಗೆ, ಭ್ರಷ್ಟರಿಗೆ, ರಾಜಕಾರಣಿಗಳಿಗೆ, ಗುತ್ತಿಗೆದಾರರಿಗೆ, ಹೀಗೆ ಎಲ್ಲರಿಗೂ ಸಿಂಹ ಸ್ವಪ್ನವಾಗಿದ್ದಾರೆ. ಅಂದರೆ ಅನ್ಯಾಯ ಮಾಡುವವರಿಗೆ ಮಾತ್ರ. ಅವರ ಲಾಠಿ ರುಚಿಯಿಂದ ಅನ್ಯಾಯ ಮಾಡುವವರು ತತ್ತರಿಸಿಹೋಗಿದ್ದಾರೆ. ಇದೇ ರೀತಿ ನಮ್ಮ ದೇಶದಲ್ಲಿ ಎಲ್ಲಾ ಊರುಗಳಲ್ಲಿ ಈ "ಗುಲಾಬಿ ಗ್ಯಾಂಗ್" ಸ್ಥಾಪಿತವಾಗಲಿ. ನಮ್ಮಲ್ಲಿರುವ ಸ್ತ್ರೀ ಸಂಘಗಳು ಸರ್ಕಾರ ಕೊಡುವ ಸವಲತ್ತುಗಳಿಗಾಗಿ ಅದರ ಜೀ ಹುಜೂರ್ ಆಗಿವೆ. ಇವರೇ "ಗುಲಾಬಿ ಗ್ಯಾಂಗ್" ಆಗಿ ಪರಿವರ್ತನೆಗೊಂಡರೆ, ರಾಮರಾಜ್ಯ ದೂರವಿಲ್ಲ.

-ಎ.ಪಿ. ರಂಗನಾಥ್, ಮೈಸೂರು

ವಯೋಮಿತಿ ಸಡಿಲಿಕೆ

ಕರ್ನಾಟಕ ಲೋಕಸೇವಾ ಆಯೋಗವು ಅಬಕಾರಿ ಇಲಾಖೆಯಲ್ಲಿ ಖಾಲಿಯಿರುವ ಹುದ್ದೆಗಳನ್ನು ನೇಮಕಾತಿ ಮಾಡಿಕೊಳ್ಳಲು ಅಧಿಸೂಚನೆ ಹೊರಡಿಸಿರುವುದು ಉದ್ಯೋಗಾಕಾಂಕ್ಷಿಗಳಿಗೆ ಸಂತೋಷಕರವಾದ ವಿಷಯ. ಆದರೆ ಇದರಲ್ಲಿ ವಯೋಮಿತಿಗೆ ಸಂಬಂಧಿಸಿದಂತೆ ತೊಂದರೆ ಆಗಿದೆ ಅಂದರೆ "ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದಂದು ಸಾಮಾನ್ಯ ವರ್ಗಕ್ಕೆ 26 ವರ್ಷ, ಪ.ಪಂ/ಪ.ಜಾ/ಪ್ರ–1 ಹಾಗೂ ಹಿಂದುಳಿದ ವರ್ಗದವರಿಗೆ 28 ವರ್ಷ ಗರಿಷ್ಠ ವಯೋಮಿತಿಯನ್ನು ನಿಗದಿಪಡಿಸಿದೆ. ಆದರೆ ಸರ್ಕಾರವು ಹಿಂದೆ ಎರಡು ವರ್ಷಗಳ ನಿವೃತ್ತಿ ವಯಸ್ಸು ಹೆಚ್ಚಿಗೆ ಮಾಡಿ ನಿರುದ್ಯೋಗದ ಸಮಸ್ಯೆ ಹೆಚ್ಚುವಂತೆ ಮಾಡಿದೆ. ಆದರೆ 2 ವರ್ಷ ಅವಧಿಯಲ್ಲಿ ಯಾವುದೇ ರೀತಿಯ ಉದ್ಯೋಗ ಅಧಿಸೂಚನೆ (ಪದವಿ ಮಟ್ಟದ) ಹೊರಡಿಸಿರಲ್ಲಿಲ್ಲ ಆದರೆ ಈಗ ಅಬಕಾರಿಯಲ್ಲಿ ಖಾಲಿಯಿರುವ ಹುದ್ದೆಗಳಿಗೆ ಅಧಿಸೂಚನೆಯನ್ನು ಹೊರಡಿಸಿದ್ದು ವಯೋಮಿತಿಯಲ್ಲಿ ತೊಂದರೆ ಮಾಡಿದೆ. ಹೀಗೆ ವಯೋಮಿತಿ ಮೀರಿರುವ ನಮಗೆ ದಿಕ್ಕು ತೋಚದಂತೆ ಆಗಿದೆ. ಹೀಗೆ ಕರ್ನಾಟಕ ಲೋಕಸೇವಾ ಆಯೋಗವು ಇತರ ನೇಮಕಾತಿ ನಿಯಮಗಳಲ್ಲಿ ವಯೋಮಿತಿಯನ್ನು ಸಾಮಾನ್ಯ ವರ್ಗಕ್ಕೆ 35, ಹಿಂದುಳಿದವರಿಗೆ 38, ಪ.ಪಂ/ಪ.ಜಾ/ಪ್ರ–1ಕ್ಕೆ 40 ವರ್ಷಗಳ ಗರಿಷ್ಠ ವಯೋಮಿತಿಯನ್ನು ನೀಡಿದೆ. ಕನಿಷ್ಠಪಕ್ಷ ಸಾಮಾನ್ಯ ವರ್ಗಕ್ಕೆ 28 ವರ್ಷ, ಪ.ಪಂ/ಪ.ಜಾ/ಪ್ರ–1 ಹಾಗೂ ಹಿಂದುಳಿದವರಿಗೆ 30 ವರ್ಷಗಳ ಗರಿಷ್ಠ ವಯೋಮಿತಿಯನ್ನು ನೀಡುವುದರ ಮೂಲಕ ಈ ಸಮಸ್ಯೆಯನ್ನು ಬಗೆಹರಿಸಿ ಎಂದು ಕೇಳಿಕೊಳ್ಳುತ್ತೇವೆ.

-ನಯಾಜ್ ಎ.
-ಮಧುಸೂಧನ್ ಸಿ.ಆರ್.
-ಶಿವಕುಮಾರ್ ಎಸ್.ಬಿ.
-ಸವಿತಾ ಕೆ., ತುಮಕೂರು

ಸಂದರ್ಶನ ಎಂದು?

ಕರ್ನಾಟಕ ಹಾಲು ಮಂಡಳಿಯಲ್ಲಿ ಖಾಲಿ ಇರುವ ಆಡಳಿತ ಸಹಾಯಕ ದರ್ಜೆ–2 ಹುದ್ದೆಗಳು ಸೇರಿದಂತೆ ಇನ್ನೂ ಕೆಲವು ಹುದ್ದೆಗಳನ್ನು ಭರ್ತಿ ಮಾಡಲು ಮೇ.13 ರಂದು ಸ್ಪರ್ಧಾತ್ಮಕ ಪರೀಕ್ಷೆ ನಡೆಯಿತು, ಹಾಗೂ ಸೂಕ್ತ ಅಭ್ಯರ್ಥಿಗಳಿಗೆ ಸಂದರ್ಶನಕ್ಕೆ ಕರೆ ಪತ್ರಗಳನ್ನು ಕಳುಹಿಸಲಾಗಿತ್ತು. ಜುಲೈ 28ಮತ್ತು 29 ರಂದು ಕರೆಯಲಾಗಿದ್ದ ಸಂದರ್ಶನವನ್ನು ಇದ್ದಕ್ಕಿದ್ದಂತೆ ಮುಂದೂಡಲಾಯಿತು. ಇದುವರೆಗೆ ಮತ್ತೆ ಸಂದರ್ಶನವೂ ಇಲ್ಲ. ಮಾಹಿತಿಯೂ ಇಲ್ಲ.

-ಮಂಜುನಾಥ್. ಆರ್. ಹುಣಿಸಿಕೋಟೆ

ಅಧಿಕಾರಿಗಳ ಅಲಕ್ಷ್ಯ

ಕರ್ನಾಟಕ ರಾಜ್ಯ ಸರಕಾರದ ಅಧಿಕೃತ ಅಂತರ್ಜಾಲ "ಪುರಾತನ" ಸ್ಥಿತಿಯಲ್ಲಿದೆ! www.kar.nic.in/kla/mlc.htm ಎಂಬ ವೆಬ್‌ಸೈಟ್‌ನ ಮಾಹಿತಿಗಳು ಹಳೆಯದಾಗಿರುವುದು ಮತ್ತು ಅವುಗಳನ್ನು ಪರಿಷ್ಕೃತ ಮಾಡದಿರುವುದು ಅಧಿಕಾರಿಗಳ ನಿರ್ಲಕ್ಷ್ಯವೇ ಸರಿ. ನಿಧನಹೊಂದಿದ ಎಂಎಲ್‌ಸಿಗಳ ಹೆಸರುಗಳು, ಕಾಲಾವಧಿ ಮುಗಿದ ಎಂಎಲ್‌ಸಿಗಳ ಹೆಸರುಗಳು ಹಾಗೇ ಉಳಿದಿವೆ. ಇಂತಹ ವೆಬ್‌ಸೈಟ್‌ಗಳಿಂದ ಏನು ಪ್ರಯೋಜನ?

-ಪ್ರಣವ ಕೆ., ಪುತ್ತೂರು

ಸಂಗತ

ಕನ್ನಡ ಭಾಷೆಯನ್ನು ಕೊಲ್ಲುತ್ತೀರೋ? ಬದುಕಿಸುತ್ತೀರೋ?

ಕೆಲ ವರ್ಷಗಳ ಹಿಂದೆ ನಾನು ರಷ್ಯಾಕ್ಕೆ ಹೋಗಿದ್ದೆ. ನನಗೆ ರಷ್ಯನ್ ಭಾಷೆ ಬರುತ್ತಿಲ್ಲವಾದರೂ ರಷ್ಯನ್ ಆಕಾಶವಾಣಿಯನ್ನು ಆಲಿಸುವ ಆಸಕ್ತಿಯನ್ನು ಇರಿಸಿಕೊಂಡಿದ್ದೆ.

ಹದಿನೈದು ನಿಮಿಷಗಳ ಸುದ್ದಿ ಬಿತ್ತರಣೆಯಲ್ಲಿ ಇಂಗ್ಲಿಷ್ ಪದಗಳು ಉಪಯೋಗವಾಗುತ್ತವೆಯೋ ಎನ್ನುವುದನ್ನು ತಿಳಿಯುವುದು ನನಗೆ ಬೇಕಾಗಿದ್ದಿತು. ಇಂಗ್ಲಿಷ್ ಶಬ್ದಗಳು ಉಪಯೋಗವಾಗಿದ್ದರೆ ನನಗೆ ತಿಳಿಯುತ್ತಿತ್ತು. ಅಲ್ಲಿಯ ಆಕಾಶವಾಣಿಯನ್ನು ನಾನು ನಾಲ್ಕೈದು ದಿನ ಆಸ್ಥೆಯಿಂದ ಆಲಿಸಿದೆನಾದರೂ ಒಂದೂ ಇಂಗ್ಲಿಷ್ ಪದ ನನ್ನ ಕಿವಿಗೆ ಬೀಳಲಿಲ್ಲ.

ಜಗತ್ತಿನ ಅನೇಕ ದೇಶಗಳ ಜನರು ತಮ್ಮ ಭಾಷೆಯ ಪರಿಶುದ್ಧತೆಯನ್ನು ಕಾಯ್ದುಕೊಳ್ಳಲು ಮುಂದಾಗಿದ್ದಾರೆ. ತಮ್ಮ ಭಾಷೆಗಳ ಬಗೆಗೆ ಭಾರಿ ಅಭಿಮಾನ ಇರಿಸಿಕೊಂಡಿರುವ ಜನರನ್ನು ನಾನು ಕಂಡಿದ್ದೇನೆ. ತಮ್ಮ ಭಾಷೆಯಲ್ಲಿ ಇಂಗ್ಲಿಷ್ ಪದಗಳ ಮಿಶ್ರಣ ಆಗುವುದನ್ನು ಫ್ರೆಂಚರು, ಜರ್ಮನ್ನರು, ರಷ್ಯನ್ನರು ಯಾರೊಬ್ಬರಿಗೂ, ತಮ್ಮ ಭಾಷೆ, ತನ್ನ ಪರಿಶುದ್ಧತೆಯನ್ನು ಕಳೆದುಕೊಂಡು ಕಲುಷಿತಗೊಳ್ಳುವುದು ಬೇಕಾಗಿಲ್ಲ. ಚೀನಿಯರು ಹಾಗೂ ಜಪಾನಿಯರು ಅಷ್ಟೇ ಏಕೆ, ಥಾಯ್ಲೆಂಡ್ ಜನರು ಕೂಡ ತಮ್ಮ ಭಾಷೆ ಕಲುಷಿತಗೊಳ್ಳುವುದನ್ನು ತಡೆದು ಅದು ಪರಿಶುದ್ಧವಾಗಿ ಉಳಿಯುವುದನ್ನು ನೋಡಿಕೊಳ್ಳಬೇಕೆನ್ನುತ್ತಾರೆ.

ತಮ್ಮ ಭಾಷೆಯ ಬಗೆಗೆ ಅಭಿಮಾನ ಇಲ್ಲದ ಜನರೆಂದರೆ ಕನ್ನಡಿಗರೊಬ್ಬರೇ ಎಂದು ತೋರುತ್ತದೆ. ತಮ್ಮ ಭಾಷೆಯನ್ನು ಕಳೆದುಕೊಂಡ ಜನರು ತಮ್ಮ ಅಸ್ತಿತ್ವವನ್ನೇ ಕಳೆದುಕೊಳ್ಳುತ್ತಾರೆ.

ಒಂದು ಲೆಕ್ಕದ ಪ್ರಕಾರ ಜಗತ್ತಿನಲ್ಲಿ ಈಗ 6,000 ಭಾಷೆಗಳು ಇವೆ. ಪ್ರಭಾವಿ ಭಾಷೆಗಳ ಒತ್ತಡದಿಂದ ಅವುಗಳಲ್ಲಿ ಎಷ್ಟೋ ಭಾಷೆಗಳು ಕಣ್ಮರೆ ಆಗತೊಡಗಿವೆ. ಮುಂದಿನ ಒಂದು ನೂರು ವರ್ಷಗಳ ಅವಧಿಯಲ್ಲಿ ಜಗತ್ತಿನ ಎಂಬತ್ತರಷ್ಟು ಭಾಷೆಗಳು ಅಳಿದು, ಕಳೆದು ಹೋಗುತ್ತವೆಯೆಂದು ಭಾಷಾ ತಜ್ಞರು ಹೇಳುತ್ತಾರೆ. ಅವುಗಳಲ್ಲಿ ಎಷ್ಟೋ ಭಾಷೆಗಳು ಈಗಾಗಲೇ ಅವಸಾನದ ಅಂಚಿಗೆ ಬಂದು ನಿಂತಿವೆ.

ಅವುಗಳ ಸ್ಥಿತಿ ಕನ್ನಡಕ್ಕೆ ಬರಬಾರದು. ಕನ್ನಡವನ್ನು ಉಳಿಸಿಕೊಳ್ಳುವುದೂ ಕನ್ನಡಿಗರ ಕೈಯಲ್ಲಿಯೇ ಇದೆ. ಕನ್ನಡ ಭಾಷೆ ಇಂದು– ನಿನ್ನೆಯದಲ್ಲ. ಅದಕ್ಕೆ ಪ್ರಾಚೀನ ಇತಿಹಾಸ ಇದೆ. ಇಂಗ್ಲೆಂಡಿನಲ್ಲಿ ಇಂಗ್ಲಿಷ್ ಇಲ್ಲದಿದ್ದಾಗ ಕರ್ನಾಟಕದಲ್ಲಿ ಕನ್ನಡ ಇತ್ತು. ಇಂಗ್ಲಿಷಿನ ಮೊಟ್ಟಮೊದಲನೆಯ ಪುಸ್ತಕ, ಚಾಸರ್‌ನ 'ಕ್ಯಾಂಟರ್‌ಬರೀ ಟೇಲ್ಸ್' ಹದಿನಾಲ್ಕನೆಯ ಶತಮಾನದಲ್ಲಿ ಬಂದರೆ, ಕನ್ನಡದ 'ವೊಡ್ಡಾರಾಧನೆ' ಅದಕ್ಕಿಂತ ಏಳುನೂರು ವರ್ಷಗಳ ಹಿಂದೆಯೇ ಬಂದಿದೆ.

ಕನ್ನಡಕ್ಕೆ ಪ್ರಾಚೀನ ಇತಿಹಾಸ ಇದೆ. ಅದು, ಜಗತ್ತಿನ 15–20 ಹಳೆಯ ಭಾಷೆಗಳಲ್ಲಿ ಒಂದು. ಇದರ ಬಗೆಗೆ ಕನ್ನಡಿಗರಲ್ಲಿ ಸಹಜವಾದ ಅಭಿಮಾನ ಇರಬೇಕು. ಚೈತನ್ಯ ಕಳೆದುಕೊಂಡು ಸಾವಿನ ಸ್ಥಿತಿಯನ್ನು ತಂದುಕೊಂಡಿದ್ದ ಯಹೂದಿ ಭಾಷೆಗೆ ಇಸ್ರೇಲಿಗಳು ಬದುಕುವ ಮದ್ದು ನೀಡಿ ಅದಕ್ಕೆ ನವಚೇತನ ಒದಗಿಸಿಕೊಟ್ಟಿದ್ದಾರೆ. ಒಂದು ಭಾಷೆ ಬದುಕುವುದೂ ಸಾಯುವುದೂ ಆ ಭಾಷೆಯನ್ನು ಆಡುವವರ ಕೈಯಲ್ಲಿಯೇ ಇದೆ. ಇದು ಗುಬ್ಬಿಯನ್ನು ತನ್ನ ಮುಷ್ಟಿಯಲ್ಲಿ ಮುಚ್ಚಿಕೊಂಡಿದ್ದ ಕಥೆಯಂತೆಯೇ ಇದೆ. ಅದು ಸತ್ತಿದೆಯೆಂದು ಹೇಳಿದರೆ ಅವನು ಅದನ್ನು ಪುರ್ರನೇ ಹಾರಿಬಿಡುತ್ತಾನೆ. ಅದು ಬದುಕಿದೆಯೆಂದು ಹೇಳಿದರೆ ಅವನು ಅದರ ಕತ್ತು ಹಿಸುಕಿ ಸಾಯಿಸುತ್ತಾನೆ. ಈಗ ಕನ್ನಡಿಗರ ಕೈಯಲ್ಲಿ ಕನ್ನಡದ ಸ್ಥಿತಿಯೂ ಅದೇ ರೀತಿಯಾಗಿದೆ. ಅವರು ಅದನ್ನು ಬದುಕಿಸುವ ಸಂಕಲ್ಪ ತೊಟ್ಟರೆ ಅದು ಬದುಕಿ ಉಳಿಯುತ್ತದೆ. ಬೆಳೆದು ವಿಜೃಂಭಿಸುತ್ತದೆ. ಇಲ್ಲದಿದ್ದರೆ ಅದು ಅವರ ಕಣ್ಣೆದುರಿನಲ್ಲಿಯೇ ಕಳೆದು ಕಣ್ಮರೆಯಾಗಿ ಹೋಗುತ್ತದೆ.

ಕನ್ನಡವನ್ನು ಬದುಕಿಸಬೇಕು, ಬೆಳೆಸಬೇಕು ಎನ್ನುವ ಸಂಕಲ್ಪವನ್ನು ಕನ್ನಡ ಜನ, ಅವರ ಸರ್ಕಾರ ಸಂಕಲ್ಪ ತೊಟ್ಟರೆ ಕನ್ನಡಕ್ಕೆ ವರ್ತಮಾನ ಹಾಗೂ ಭವಿಷ್ಯತ್ತು ಎರಡೂ ಇವೆ.

ಕನ್ನಡಿಗರಲ್ಲಿ ಈಗ ಇಂಗ್ಲಿಷಿನ ಮೋಹ ಆವರಿಸಿಕೊಂಡಿದೆ. ಸಾಮಾನ್ಯ ಮನೆಗಳಲ್ಲಿ ಕೂಡ ಈಗ ಅವ್ವ, ಅಪ್ಪ ಪದಗಳು ಉಳಿದಿಲ್ಲ. ಹಳೆಯ ಅಲಂಕಾರಗಳೆಂಬಂತೆ ಅವು ಅಸಹ್ಯವೆನಿಸಿ, ಅವುಗಳ ಸ್ಥಳದಲ್ಲಿ ಮಮ್ಮಿ, ಡ್ಯಾಡಿ ಎಂಬ ಪದಗಳನ್ನು ತಂದು ಕೊಂಡಿದ್ದೇವೆ.

ಮುಂಚಿನ ಮಾನವ ಸಂಬಂಧಗಳು ಈಗ ಉಳಿದಿಲ್ಲ. ಗಂಡಸರು, ಅವರು ಯಾರೇ ಇರಲಿ, ಅವರೆಲ್ಲರೂ ಈಗ ಅಂಕಲ್ ಆಗಿದ್ದಾರೆ. ಹೆಂಗಸರು ಯಾರೇ ಇರಲಿ, ಅವರೆಲ್ಲರೂ ಆಂಟಿ ಆಗಿದ್ದಾರೆ. ಈ ಪದಗಳು ಈಗ ಸ್ಥಿತಿವಂತರನ್ನು ಮಾತ್ರವಲ್ಲ, ಕೂಲಿ ಕುಂಬಳಿ ಮಾಡುವ ಜನರನ್ನು ಹಿಡಿದುಕೊಂಡು, ಅವರ ಶಬ್ದಕೋಶದಲ್ಲಿ ಸೇರಿಕೊಂಡಿವೆ. ದಿನನಿತ್ಯದ ನಮ್ಮ ಮಾತಿನಲ್ಲಿ ಇಂಗ್ಲಿಷ್ ಪದಗಳಿಗೆ ಪ್ರಾಮುಖ್ಯತೆ ಬಂದು ಕನ್ನಡ ಶಬ್ದಗಳು ಹಿಂದೆ ಸರಿಯತೊಡಗಿವೆ.

ನಾವು ನಮ್ಮ ಮಾತಿನಲ್ಲಿ ಕನ್ನಡ ಶಬ್ದಗಳನ್ನು ಹಿಂದಕ್ಕೆ ದೂಡಿ ಇಂಗ್ಲಿಷ್ ಪದಗಳನ್ನು ಹೆಚ್ಚು ಹೆಚ್ಚಾಗಿ ಬಳಸುವ ಪ್ರವೃತ್ತಿಯನ್ನು ಬೆಳೆಸಿಕೊಂಡಿದ್ದೇವೆ. ಭಾರತೀಯರಲ್ಲಿ, ತಾನು ಆಡುವ ಮಾತಿನಲ್ಲಿ ಇಂಗ್ಲಿಷ್ ಶಬ್ದಗಳನ್ನು ಉಪಯೋಗಿಸುವವರು ಕನ್ನಡ ಜನರನ್ನು ಬಿಟ್ಟರೆ ಬೇರೆ ಯಾರೊಬ್ಬರೂ ಇಲ್ಲ. ಇಂಗ್ಲಿಷನ್ನು ತಮ್ಮ ಮಾತಿನಲ್ಲಿ ಉಪಯೋಗಿಸುವವರು ಸುಧಾರಿಸಿದ ಜನ ಎಂಬ ಹುಚ್ಚಿಗೆ ಬಿದ್ದು ಕನ್ನಡ ಜನರೇ ಕನ್ನಡವನ್ನು ಕೊಲ್ಲತೊಡಗಿದ್ದಾರೆ.

ಕನ್ನಡ ಬಲ್ಲವರೊಡನೆ ಮಾತನಾಡುವಾಗಲೂ ತಮಗೆ ಇಂಗ್ಲಿಷ್ ಬರುತ್ತದೆ, ತಾವು ಸುಧಾರಿಸಿದವರು ಎನ್ನುವುದನ್ನು ತೋರಿಸಿಕೊಳ್ಳಲು ಅವರು ತಮ್ಮ ಬಟ್ಲರ್ ಇಂಗ್ಲಿಷಿನಲ್ಲಿಯೇ ಮಾತನಾಡಬೇಕೆನ್ನುತ್ತಾರೆ.

ದೈನಂದಿನ ಸುದ್ದಿಗಳನ್ನು ಪ್ರಕಟಿಸುವ ನಮ್ಮ ಹಲವಾರು ಪತ್ರಿಕೆಗಳು ಕನ್ನಡವನ್ನು ಕುಲಗೆಡಿಸತೊಡಗಿವೆ. ಕನ್ನಡ ಶಬ್ದಗಳನ್ನು ಉಪಯೋಗಿಸುವ ಕಡೆಯಲ್ಲಿಯೂ ಅವು ಇಂಗ್ಲಿಷ್ ಶಬ್ದಗಳನ್ನು ತಂದು ತುರುಕತೊಡಗಿವೆ. ಅನಿವಾರ್ಯವೆನ್ನುವ ಕಡೆಯಲ್ಲಿ ಅವು ಇಂಗ್ಲಿಷ್ ಶಬ್ದಗಳನ್ನು ಉಪಯೋಗಿಸಬಹುದು. ಆದರೆ ಅಂಥ ಅನಿವಾರ್ಯತೆಯೇನೂ ಇರುವುದಿಲ್ಲ. ಕನ್ನಡ ಪತ್ರಿಕೆಗಳಲ್ಲಿ ಬರುವ ಜಾಹೀರಾತುಗಳಲ್ಲಿ ಇಂಗ್ಲಿಷ್ ಶಬ್ದಗಳನ್ನು ಸಿಕ್ಕಾಪಟ್ಟೆಯಾಗಿ ತಂದು ತುರುಕತೊಡಗಿದ್ದಾರೆ. ಕನ್ನಡ ಭಾಷೆಯನ್ನು ಕೆಡಿಸಲು ಏನೆಲ್ಲ ಮಾಡಬೇಕೋ ಅದನ್ನು ಬಹು ವ್ಯವಸ್ಥಿತವಾಗಿ ಮಾಡುತ್ತಿದ್ದಾರೆ.

ಶಿಕ್ಷಣ ಅಭಿಯಾನದ ಕಾರ್ಯಕ್ರಮಗಳು ಆಕಾಶವಾಣಿಯಲ್ಲಿ ಬಿತ್ತರಣೆಗೊಳ್ಳುತ್ತವೆ. ಅಲ್ಲಿ ಮಕ್ಕಳ ಮಧ್ಯದಲ್ಲಿ ಕಾಣಿಸಿಕೊಳ್ಳುವ ಮುಖ್ಯ ಅಧ್ಯಾಪಕರು 'ಮಕ್ಕಳೇ, ನೀವು ನಾಳೆ ನಿಮ್ಮ ಪೇರೆಂಟನ್ನು ಕರೆದುಕೊಂಡು ಬನ್ನಿ ಎನ್ನುತ್ತ, 'ಈಗ ನೀವು ನಿಮ್ಮ ಕ್ಲಾಸಿಗೆ ಹೋಗಿ' ಎಂದು ಹೇಳುತ್ತಾರೆ. ಕನ್ನಡ ಭಾಷೆಯನ್ನು ಹಂಡಬಂಡಗೊಳಿಸುವ ಈ ಕೆಟ್ಟ ಕೆಲಸಕ್ಕೆ ಎಂದು ಕೊನೆ ಆಗುತ್ತದೆ?

- ಡಾ.ಪಾಟೀಲ ಪುಟ್ಟಪ್ಪ